# 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| **S.C.No** : | 268/2021 |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀಮತಿ ನಾಗಮಣಿ | |
| ಗಂಡನ ಹೆಸರು | ಶ್ರೀ ಪುಟ್ಟರಂಗಯ್ಯ | ಸಾಕ್ಷಿಗೆ **ದಿಃ 19.06.2023** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 55 ವರ್ಷ | |
| ಉದ್ಯೋಗ | ಕೂಲಿ ಕೆಲಸ | ಪಿ.ಡಬ್ಲ್ಯೂ-03 |
| ವಾಸ ಸ್ಥಳ | ಮೂಗೂರು. | ಸಿ.ಡಬ್ಲ್ಯೂ-05 |

## ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ನಾನು ಮೂಗೂರು ಗ್ರಾಮ, ಅಂಬೇಡ್ಕರ ಕಾಲೋನಿಯಲ್ಲಿ ವಾಸ ಇದ್ದೆನೆ. ನನ್ನ ಭಾವನ ಮಗಳು ಭಾಗ್ಯಲಕ್ಷ್ಮೀ ಮೃತಪಟ್ಟಿದ್ದಾಳೆ. ಭಾಗ್ಯಲಕ್ಷ್ಮೀ ಮತ್ತು ಮಹದೇವಯ್ಯ ಅವರ ನಡುವೆ ಸುಮಾರು 25 ವರ್ಷಗಳ ಹಿಂದೆ ಮದುವೆ ಆಗಿದೆ. ಮದುವೆ ನಂತರ ಭಾಗ್ಯಲಕ್ಷ್ಮೀ ಮತ್ತು ಅವರ ಯಜಮಾನರು ಕಾಫಿ ತೋಟದಲ್ಲಿ ಕೆಲಸ ಮಾಡಿಕೊಂಡು ಇದ್ದರು. ಭಾಗ್ಯಲಕ್ಷ್ಮೀಗೆ 16 ವರ್ಷದ ಮಗಳು, 14 ವರ್ಷದ ಮಗ ಇದ್ದರು. ಈಗ 5-6 ವರ್ಷಗಳ ಹಿಂದೆ ಭಾಗ್ಯಲಕ್ಷ್ಮೀ ತನ್ನ ಮಕ್ಕಳನ್ನು ಕರೆದುಕೊಂಡು ಮೂಗೂರು ಗ್ರಾಮದ ಚಾಸಾ-8 ಅವರ ಮನೆಗೆ ಬಂದು ವಾಸ ಮಾಡುತ್ತಿದ್ದರು. ಈಗ ಸುಮಾರು 2 ವರ್ಷದ ಹಿಂದೆ ಭಾಗ್ಯಲಕ್ಷ್ಮೀ ಮೃತಪಟ್ಟಿದ್ದಾರೆ. ಭಾಗ್ಯಲಕ್ಷ್ಮೀ ಅವರ ಮಗಳು ಚಾಮರಾಜನಗರದಲ್ಲಿ ನರ್ಸಿಂಗ್ ಕೆಲಸ ಮಾಡುತ್ತಿದ್ದರು. ಭಾಗ್ಯಲಕ್ಷ್ಮೀ ಅವರ ಮಗ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ನನ್ನ ಮನೆಯಿಂದ ಚಾಸಾ-8 ಅವರ ಮನೆ ಸುಮಾರು ½ ಕೀ.ಮೀ ದೂರ ಇದೆ.

ವಿ.ಸಿ ಮೂಲಕ ಹಾಜರು ಮಾಡಿದ ಆರೋಪಿಯನ್ನು ನೋಡಿದ್ದೇನೆ ಮತ್ತು ಪರಿಚಯ ಇದೆ. ಆರೋಪಿಯ ತಂದೆಯ ಹೆಸರು ನಂಜುಂಡಯ್ಯ. ಆರೋಪಿ ಮೂಗೂರು

ಗ್ರಾಮದವರು. ನನಗೆ ಓದು-ಬರಹ ಬರುವುದಿಲ್ಲ, ಹೆಬ್ಬೆಟ್ಟು ಗುರುತು ಹಾಕಿದ್ದೇನೆ. ಈಗ ಸುಮಾರು 2 ವರ್ಷದ ಹಿಂದೆ ಪೊಲೀಸರು ಟಿ.ನರಸೀಪುರ ಸರ್ಕಾರಿ ಆಸ್ಪತ್ರೆಯಲ್ಲಿ ಮೃತ ಶವ ಇದ್ದ ಸ್ಥಳದಲ್ಲಿ ನಾನು ಶವ ನೋಡಿದ ಬಗ್ಗೆ ನಿಪಿ-12 ದಾಖಲೆಯಲ್ಲಿ ಹೆಬ್ಬೆಟ್ಟು ಗುರುತು ಪಡೆದಿದ್ದಾರೆ. ನನ್ನ ಹೊರತಾಗಿ ಸ್ಥಳದಲ್ಲಿ ಇತರೆ ವ್ಯಕ್ತಿಗಳ ಇದ್ದರು ಹೆಸರು ಗೊತ್ತಿಲ್ಲ. ಭಾಗ್ಯಲಕ್ಷ್ಮೀ ಅವರ ದೇಹದ ಮೇಲೆ ಒಂದು ಕರಿಮಣಿ ಸರದಲ್ಲಿ, ಎರಡು ಕರಿಮಣಿ, ಎರಡು ಕೆಂಪ್ಪು ಮಣಿ, ಚಿನ್ನದ ತಾಳಿ, ಗುಂಡು ಮತ್ತು ಮೂಗುತಿ ಇತ್ತು, ಮೈ ಮೇಲೆ ನೈಟಿ ಇತ್ತು.

ಭಾಗ್ಯಲಕ್ಷ್ಮೀ ಅವರ ತಲೆಯ ಮೇಲೆ, ಗದ್ದದ ಬಳಿ ಮತ್ತು ಕುತ್ತಿಗೆಯ ಬಳಿ ಗಾಯಗಳು ಆಗಿದ್ದವು. ಪೊಲೀಸರು ಭಾಗ್ಯಲಕ್ಷ್ಮೀ ಅವರ ದೇಹದ ಮೇಲೆ ಇದ್ದ ಒಂದು ಕರಿಮಣಿ ಸರವನ್ನು ಚಾಸಾ-1 ಅವರಿಗೆ ಕೊಟ್ಟಿದ್ದರು. ಚಾಸಾ-1 ಅವರನ್ನು ಆರೋಪಿ ಪ್ರೀತಿಸುತ್ತಿದ್ದರು. ಅದೇ ಕಾರಣ ಭಾಗ್ಯಲಕ್ಷ್ಮೀ ಅವರು ಆರೋಪಿಗೆ ಚಾಸಾ-1 ಅವರ ಜೊತೆ ಮಾತನಾಡದಂತೆ ಹೇಳಿದ್ದರು. ಅದೇ ಕಾರಣವಾಗಿ ಆರೋಪಿ ಚಾಸಾ-1 ಅವರ ಬಳಿ ಭಾಗ್ಯಲಕ್ಷ್ಮೀ ಅವರನ್ನು ಮುಗಿಸುವುದಾಗಿ ಹೇಳುತ್ತಿದ್ದರು. ಭಾಗ್ಯಲಕ್ಷ್ಮೀ ಅವರು ಶೌಚಕ್ಕೆ ಹೋದಾಗ ಆರೋಪಿ ಎಲ್.ಕೋಟ್ ನಿಂದ ಹಲ್ಲೆ ಮಾಡಿ ಕೊಲೆ ಮಾಡಿದ್ದಾರೆ ಎಂದು ತಿಳಿಯಿತು. ಹಲ್ಲೆ ಮಾಡಿದ ಸ್ಥಳದಿಂದ ಸುಮಾರು ½ ಕೀ.ಮೀ ದೂರದಲ್ಲಿ ಕಾಲುವೆಯಲ್ಲಿ ಇರುವ ನೀರಿನ ಪೈಪನಲ್ಲಿ ಹೆಣದ ಮುಖಕ್ಕೆ ಚೀಲ ಹಾಕಿ, ಹಾಕಿದ್ದರು ಎಂದು ತಿಳಿಯಿತು. ನಿಪಿ-12 ರ ಕಾಲದಲ್ಲಿ ನನ್ನ ಜೊತೆ ನಮ್ಮ ಪಕ್ಕದ ಮನೆಯ ವ್ಯಕ್ತಿಗಳು ಇದ್ದರು. ಶವದ ಮೈ ಮೇಲೆ ಇದ್ದ ನೈಟಿಯನ್ನು ನೋಡಿದ್ದೇನೆ. ಇದನ್ನು ಈಗಾಗಲೇ ಎಂ.ಓ-8 ಎಂದು ಗುರುತಿಸಲಾಗಿದೆ.

**ಪಾಟೀಸವಾಲು :- ಆರೋಪಿ ಪರ ಶ್ರೀ ಆರ್.ಇ ವಕೀಲರಿಂದಃ-**

ಭಾಗ್ಯಲಕ್ಷ್ಮೀ ಅವರು ಮೊದಲನೇ ಗಂಡನ ಜೊತೆ ಊಟಿಯಲ್ಲಿ ವಾಸ ಇದ್ದರು ಎಂದರೆ ಸರಿ. ಊಟಿಯಲ್ಲಿ ಭಾಗ್ಯಲಕ್ಷ್ಮೀ ಅವರು ತನ್ನ ಗಂಡ ಮತ್ತು ಮಕ್ಕಳ ಜೊತೆ ಚೆನ್ನಾಗಿ ಇದ್ದರು ಎಂದರೆ ಸರಿ. ಊಟಿಯಲ್ಲಿ ಸುಮಾರು 10-12 ವರ್ಷಗಳ ಕಾಲ ಇದ್ದರು.

ಭಾಗ್ಯಲಕ್ಷ್ಮೀ ಅವರು ತನ್ನ ಗಂಡನ ಜೊತೆ ಗಲಾಟೆ ಮಾಡಿಕೊಂಡು ತವರು ಮನೆಗೆ ವಾಪಸ್ಸು ಬಂದಿದ್ದರು. ಟಿ.ನರಸೀಪುರ ನ್ಯಾಯಾಲಯದಲ್ಲಿ ವಿಚ್ಚೇದನ ಪ್ರಕರಣ ಇತ್ತು. ಭಾಗ್ಯಲಕ್ಷ್ಮೀ ಅವರು ತನ್ನ ಗಂಡನಿಗೆ ತಿಳಿಸದೇ 5-6 ದಿನಗಳ ಕಾಲ ಮನೆಯಿಂದ ಹೊರಗೆ ಹೋಗುತ್ತಿದ್ದರು ಎಂದು ತಿಳಿದಿದ್ದೇನೆ. ಸದರಿ ವಿಷಯವಾಗಿ ಪಂಚಾಯ್ತಿ ಮಾಡಿ ಭಾಗ್ಯಲಕ್ಷ್ಮೀ ಅವರಿಗೆ ಸಾಕಷ್ಟು ಸಲ ಬುದ್ದಿವಾದ ಹೇಳಿದ್ದರು ಎಂದರೆ ಸರಿ. ಆದರೂ ಸಹ ಭಾಗ್ಯಲಕ್ಷ್ಮೀ ತನ್ನ ನಡತೆಯಲ್ಲಿ ಬದಲಾವಣೆ ಮಾಡಿಕೊಂಡಿರಲಿಲ್ಲ ಎಂದರೆ ಸರಿ. ಪಂಚಾಯ್ತಿ ಕಾಲದಲ್ಲಿ ಭಾಗ್ಯಲಕ್ಷ್ಮೀ ಅವರು ಮೂಗೂರು ಗ್ರಾಮಕ್ಕೆ ಬರದೇ ಬೇರೆ, ಬೇರೆ ಊರಿಗೆ ಹೋಗುತ್ತಿದ್ದ ಬಗ್ಗೆ ಭಾಗ್ಯಲಕ್ಷ್ಮೀ ಅವರ ಯಜಮಾನರು-ಮಹದೇವಯ್ಯ ಹೇಳಿದ್ದರು ಎಂದರೆ ಸರಿ.

ಟಿ.ನರಸೀಪುರ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಯಲ್ಲಿ ಬಾಕಿ ಇದ್ದಾಗ ಚಾಸಾ-2 ಅವರು ಭಾಗ್ಯಲಕ್ಷ್ಮೀ ಅವರ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದರು ಎಂದು ತಿಳಿದಿದ್ದೇನೆ ಎಂದರೆ ಸರಿ. ಸದರಿ ವಿಷಯ ಮೂಗೂರು ಗ್ರಾಮದ ವ್ಯಕ್ತಿಗಳಿಗೆ ಗೊತ್ತು ಎಂದರೆ ಸರಿ. ಚಾಸಾ-2 ಅವರಿಗೆ ಮೂಗೂರು ಗ್ರಾಮದಲ್ಲಿ ಪತ್ನಿ ಮತ್ತು ಮಕ್ಕಳು ಇದ್ದಾರೆ ಎಂದರೆ ಸರಿ. ಚಾಸಾ-2 ಅವರ ಪತ್ನಿಗೆ ವಿಷಯ ತಿಳಿದು ಊರಿನಲ್ಲಿ ಪಂಚಾಯ್ತಿ ಆಗಿತ್ತು ಎಂದರೆ ಸರಿ. ಆರೋಪಿ ಮತ್ತು ಚಾಸಾ-1 ಅವರ ನಡುವೆ ಪ್ರೀತಿ ಇತ್ತು ಎಂದರೆ ಸರಿ. ಚಾಸಾ-1 ಅವರನ್ನು ಸರ್ಕಾರಿ ನೌಕರಿಯಲ್ಲಿ ಇದ್ದ ವ್ಯಕ್ತಿಗೆ ಮದುವೆ ಮಾಡುವ ಬಗ್ಗೆ ಪ್ರಯತ್ನ ಮಾಡಿದ್ದರು ಎಂದರೆ ಸರಿ. ಚಾಸಾ-1 ಮತ್ತು ಆರೋಪಿ ಮನೆ ಅಕ್ಕ-ಪಕ್ಕ ಇತ್ತು ಎಂದರೆ ಸರಿ. ಚಾಸಾ-1 ಅವರು ಆರೋಪಿಯ ಜೊತೆ ಮದುವೆ ಆಗುವ ಬಗ್ಗೆ ತನ್ನ ತಾಯಿಗೆ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿ. ಸದರಿ ವಿಷಯ ಊರಿನ ವ್ಯಕ್ತಿಗಳಿಗೆ ತಿಳಿದಿತ್ತು ಎಂದರೆ ಸರಿ. ಚಾಸಾ-3 ಮತ್ತು 4 ಅವರು ಚಾಸಾ-2 ಅವರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು ಎಂದು ಗೊತ್ತು. ಚಾಸಾ-1 ಅವರನ್ನು ಮನೆಯಲ್ಲಿ ಬಿಟ್ಟು ಭಾಗ್ಯಲಕ್ಷ್ಮೀ ಅವರು 3-4 ದಿನಗಳ ಕಾಲ ಬೇರೆ ಊರಿಗೆ ಹೋಗುತ್ತಿದ್ದರು ಎಂದರೆ ಸರಿ.

ಚಾಸಾ-1 ಅವರನ್ನು ಆರೋಪಿ ಮದುವೆ ಆಗುವ ಬಗ್ಗೆ ಚಾಸಾ-1 ಅವರ ಮನೆಯಲ್ಲಿ ಇಷ್ಟ ಇತ್ತು ಎಂದರೆ ಸರಿ. ಭಾಗ್ಯಲಕ್ಷ್ಮೀ ಮತ್ತು ಚಾಸಾ-2 ಅವರ ನಡುವೆ ಇರುವ ಅನೈತಿಕ ಸಂಬಂಧ ಬಿಟ್ಟು ಚಾಸಾ-1 ಅವರನ್ನು ಆರೋಪಿಗೆ ಕೊಟ್ಟು ಮದುವೆ ಮಾಡುವಂತೆ ಊರಿನ ವ್ಯಕ್ತಿಗಳು ಹೇಳಿದ್ದರು ಎಂದರೆ ಸರಿ.ಆರೋಪಿ ಭಾಗ್ಯಲಕ್ಷ್ಮೀ ಅವರಿಗೆ ಚಾಸಾ-2 ಅವರ ಜೊತೆ ಇರುವ ಅನೈತಿಕ ಸಂಬಂಧವನ್ನು ಬಿಡುವಂತೆ ಮತ್ತು ತಾನು ಚಾಸಾ-1 ಅವರನ್ನು ಮದುವೆ ಆಗುವುದಾಗಿ ಹೇಳಿದ ಕಾರಣ ಆರೋಪಿ ಮತ್ತು ಭಾಗ್ಯಲಕ್ಷ್ಮೀ ಅವರ ನಡುವೆ ಗಲಾಟೆ ಆಗಿತ್ತು ಎಂದರೆ ಸರಿ. ಚಾಸಾ-1 ಅವರನ್ನು ನರ್ಸಿಂಗ್ ವಿದ್ಯಾಭ್ಯಾಸಕೆ ಚಾಮರಾಜನಗರಕ್ಕೆ ಕಳುಹಿಸಿದ್ದರು ಎಂದರೆ ಸರಿ. ನಾನು ಎರಡು ಸಲ ಹೆಬ್ಬೆಟ್ಟು ಹಾಕಿದ್ದೇನೆ. ನಾನು ಖಾಲಿ ಹಾಳೆಯಲ್ಲಿ ಹೆಬ್ಬೆಟ್ಟು ಹಾಕಿದ್ದೇನೆ. ನಾನು ಪೊಲೀಸ್ ಠಾಣೆ ಹೊರಗಡೆ ಹೆಬ್ಬೆಟ್ಟು ಹಾಕಿದ್ದೇನೆ. ಆರೋಪಿ ಮತ್ತು ಚಾಸಾ-1 ಅವರ ನಡುವೆ ಪ್ರೀತಿ ಇದ್ದ ಕಾರಣ ನಾನು ಮತ್ತು ಚಾಸಾ-2, 3, ಮತ್ತು 4 ಆರೋಪಿ ಭಾಗ್ಯಲಕ್ಷ್ಮೀ ಅವರನ್ನು ಮುಗಿಸುವುದಾಗಿ ಹೇಳಿದ ಬಗ್ಗೆ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಅಮಾಯಕ ಇದ್ದಾರೆ ಎಂದರೆ ಸರಿಯಲ್ಲ. ಭಾಗ್ಯಲಕ್ಷ್ಮೀ ಮೃತಪಟ್ಟ ಬಗ್ಗೆ ಚಾಸಾ-14 ಅವರು ಮಾಹಿತಿ ನೀಡಿದ್ದರು. ಘಟನೆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಘಟನೆ ಆಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು